ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಪ್ರೀತ್ಸೋದ್ ತಪ್ಪಾ ಎಂದು ಕೇಳುವ ಮಕ್ಕಳಿಗೆ ನಿಮ್ಮ ಸವಿ(ಕಿವಿ)ಮಾತೇನು ಸಾರ್?



ಮನದಲ್ಲಿ ಅಳುಕು, ಹುಳುಕು, ಕೊಳಕಿಲ್ಲದಂತೆ ಜಗವನ್ನೇ ಪ್ರೀತಿಸಿ.

ಎಚ್.ಎಂ. ಅನಂತಪದ್ಮನಾಭ, ಮೈಸೂರು
ಹೆತ್ತ ತಾಯಿಯೇ ತನ್ನ ದುರ್ಬುದ್ಧಿಯನ್ನು ಮಗುವಿನ ತಲೆಗೆ ತುಂಬಿದರೆ ಯಾರಲ್ಲಿ ದೂರುವುದು?
ಸೀರಿಯಲ್ ಕಥೆ ಬರೆಯುವವರಲ್ಲಿ. ಈಗಿನ ಸಮಾಜಕ್ಕೆ ಕೊಳೆ, ಕಳೆ ಎರಡನ್ನೂ ತುಂಬುವುದು ಅವರೇ.

ನರಸಿಂಹ ಪೈ, ಕಾಸರಕೋಡ
ಬೆಳಕಿಲ್ಲದ ಹಾದಿಯಲ್ಲಿ ನಡೆಯಬಹುದು. ಆದರೆ ಕನಸುಗಳಿಲ್ಲದ ಹಾದಿಯಲ್ಲಿ ನಡೆಯಲಾಗದು. ಏಕೆ?
ಕನಸಿಲ್ಲದಿದ್ದರೆ ಮನಸ್ಸಿರುವುದಿಲ್ಲವಲ್ಲ; ಮನಸ್ಸಿದ್ದಲ್ಲಿ ಮಾತ್ರ ಮಾರ್ಗ.

ವಿ. ಹೇಮಂತಕುಮಾರ್, ಬೆಂಗಳೂರು
ಸಿಹಿನೀರಾಗಿ ಹರಿಯುವ ನದಿ ಸಾಗರವನ್ನು ಸೇರುತ್ತಿದ್ದಂತೆ ಉಪ್ಪುನೀರಾಗುವುದೇಕೆ?



ಅಷ್ಟು ದೂರ ಓಡಿ ಬೆವೆತಿರುತ್ತಲ್ಲ.

ಸುಲೋಚನ ಜಿ. ರಾವ್, ಬೆಂಗಳೂರು
ಆಸೆಯೇ ದುಃಖಕ್ಕೆ ಮೂಲ. ಆಸೆಗೆ ಮೂಲ ಯಾವುದು?
ನೋಟ.

ಎಚ್.ವಿ. ಶ್ರೀಧರ್, ಬೆಂಗಳೂರು
ಸಾಕ್ಷಿಸಹಿತ ಅರೆಸ್ಟ್ ಆದರೂ ಕೆಲವು ಚೇಲಾಗಳು 'ಅನಗತ್ಯವಾಗಿ ನಮ್ಮ ಜಾತಿಯವರನ್ನು ಗುರಿಯಾಗಿಸಿದ್ದಾರೆ' ಎನ್ನುವುದೇಕೆ?
ಕಳ್ಳ ಸಾಕಿದ ನಾಯಿ ಪೊಲೀಸರನ್ನು ದ್ವೇಷಿಸುವುದು ಸಹಜ.

ಎನ್. ವೈದೇಹಿ ಶೇಖರ್, ಮೈಸೂರು
ಮೂಟೆಗಟ್ಟಲೆ ಹಣದ ಅವಶ್ಯಕತೆ ನಿಜಕ್ಕೂ ಇದೆಯಾ ಸಾರ್?
ಹರಾಜಾಗುವ ಮತದಾರ ಇರುವವರೆಗೆ ಅವಶ್ಯ.

ಎಚ್.ಆರ್. ದೇಸಾಯಿ, ರಾಯಚೂರು
ಸತ್ತ ಹೆಣಕ್ಕೂ ಜಾತಿ ಇರುತ್ತಾ?
ರೋಗಿ ಹೆಣ; ಜಾತಿ ರೋಗ. ರೋಗಿಗೆ ಸಾವುಂಟು, ರೋಗ ಚಿರಂಜೀವಿ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
'ಒಂದೂರಿನಲ್ಲಿ ಒಬ್ಬ ರಾಜ ಇದ್ದ' ಎನ್ನುವ ಕಥೆಗಳು ಮಾಯವಾಗುತ್ತಿವೆಯಲ್ಲ...?
'ಸುಲ್ತಾನ್' ಅನ್ನಿ, 'ಕಿಂಗ್' ಅನ್ನಿ; 'ರಾಜ'ನೇ ಏಕೆ? ಎಂಬ ಕೋಮುವಾದಿಗಳ ಗದ್ದಲಕ್ಕೆ ಸಿಲುಕಿತಂತೆ.

ರತ್ನಾ ರಾಜ್‌ಕುಮಾರ್, ಹಾಸನ
ಕೇಳುವುದಕ್ಕೂ, ಹೇಳುವುದಕ್ಕೂ ನನಗೆ ಸಮಯವಿಲ್ಲ ಎಂದು ನೀವು ಹೇಳಿದಾಗ... ನಾವು?
ನನ್ನನ್ನು ಅನರ್ಹ ಎಂದು ಘೋಷಿಸುವ ಅಧಿಕಾರ ಹೊಂದುತ್ತೀರಿ.

ಗಾಯತ್ರಿ, ಬೆಂಗಳೂರು
ದಿನಾ ಅಳುವವರಿಗೆ ಯಾರಾದರೂ ಸಮಾಧಾನ ಮಾಡುತ್ತಾರೋ ಅಥವಾ....?
ಕರೆದು ಸೀರಿಯಲ್‌ನಲ್ಲಿ ಗೋಳ್ಗೊಸೆಯ ಪಾತ್ರ ಕೊಡುತ್ತಾರೆ. ಗ್ಲಿಸರಿನ್ ಖರ್ಚು ಉಳಿಯುತ್ತದಲ್ಲ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಹಣಕ್ಕೆ ತಮ್ಮ ವ್ಯಾಖ್ಯೆ ಏನು ಸಾರ್?
ಅದು ಪೇಪರ್ ಆಕ್ಸಿಜನ್; ಪ್ರಮಾಣ ಮೀರಿದರೆ ಪರಿಣಾಮ ಘೋರ.

ವ. ಉಮೇಶ ಕಾರಂತ, ಮಂಗಳೂರು
ಹಗಲೆಲ್ಲ ಸುಡುಸುಡುವ ಸೂರ್ಯನಿಗೆ ರಾತ್ರಿ ಏನು ಕೆಲಸ?
ಮರುದಿನ ಪೂರ್ತಿ ಆಕ್ಟಿವ್ ಆಗಿರಲು ಬ್ಯಾಟರಿ ಛಾರ್ಜ್ ಮಾಡಿಕೊಳ್ಳುವುದು.

## ಬಹುಮಾನಿತ ಪ್ರಶ್ನೆ

ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ
ಸ್ವರ್ಗಕ್ಕೆ ಹೋದವರಿಗೆ 49 ಕನ್ಯೆಯರು ದೊರಕುತ್ತಾರಂತೆ. ಬೀದಿ ಬಸವಣ್ಣಗಳು ಅಲ್ಲಿಗೇಕೆ ಹೋಗಬಾರದು?
ಇವರು ಸ್ವರ್ಗಕ್ಕೆ ಹೋದ ತಕ್ಷಣ ಆ 49 ಕನ್ಯೆಯರಿಗೆ ಅದು ನರಕವಾಗುವುದರಿಂದ.

ರಮೇಶ್, ಹನುಮನಾಳು
ನೆನೆದವರು ಮನದಲ್ಲಿ ಎಂದಂತೆ ಬಂದಿರಿ, ಬನ್ನಿ ಅಂತಾರೆ; ಆದರೂ ಏನೂ ಕೊಡುವುದಿಲ್ಲ. ಏಕೆ?
ನೆನೆದದ್ದೇ 'ಅವನು ವಕ್ಕರಿಸಿಬಿಟ್ಟರೆ ಕಷ್ಟ' ಅಂತ! ಏನಾದರೂ ಕೊಟ್ಟರೆ ಮತ್ತೆ ಬಂದಾರೆಂಬ ಭಯ, ಮುನ್ನೆಚ್ಚರಿಕೆ.

ಆರತಿ ಘಟಿಕಾರ್, ಬೆಂಗಳೂರು
ಅಮ್ಮನ ಪ್ರೀತಿಗೂ, ಅತ್ತೆಯ ಪ್ರೀತಿಗೂ ವ್ಯತ್ಯಾಸವೇನು?
ಅತ್ತೆಯ ಪ್ರೀತಿಯೇ ಅತ್ಯಮೂಲ್ಯ. ಸ್ಟಾಕ್ ಇಲ್ಲದ ವಸ್ತುಗಳೇ ಎಂದಿಗೂ ದುಬಾರಿ.

ಶೃತಿ ರಿಗ್ರೆಟ್ ಅಯ್ಯರ್, ಬೆಂಗಳೂರು
ಮಕ್ಕಳಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿ ಹೆಚ್ಚಿ ನಮ್ಮ ಸಂಸ್ಕೃತಿ ಕಡಿಮೆಯಾಗುತ್ತಿದೆ. ಮುಂದೆ ಹೇಗೆ?




ಎಲ್ಲೆಲ್ಲೂ ಮಾನವೀಯತೆಯೇ ಹಬ್ಬುತ್ತದೆ ನವೀಯತೆ ಜಾಸ್ತಿ, ಮಾನ ಕಡಿಮೆ.

ರಮಾನಂದ ಶರ್ಮ, ಬೆಂಗಳೂರು
'ದೊಡ್ಡ ಯಜಮಾನ' ರಿಯಾಲಿಟಿ ಶೋಗೆ 'ರಗಳೆರಾದ್ದಾಂತ' ಎಂದು ಹೆಸರಿಟ್ಟರೆ ಹೇಗೆ?
ವ್ಯತ್ಯಾಸವೇನಾಗದು. ತಿಪ್ಪೆಯನ್ನು ಯಾವುದೇ ಹೆಸರಿನಿಂದ ಕರೆದರೂ ಅದೇ ಹೊಲಸು.

ಸೀತಾರಾಮಭಟ್ಟ, ಹಾಲ್ಮತ್ತೂರು
ಯುವ ರಾಜಕಾರಣಿಗಳು ಅವರ ಅಪ್ಪನ ಮೇಲೆ ಆಣೆ ಹಾಕುವುದಿಲ್ಲ. ಏಕೆ?
ಅವರ ಅಪ್ಪಂದಿರ ಪ್ರಾಮಾಣಿಕತೆಯ ಮೌಲ್ಯ ಒಂದಾಣೆಯಷ್ಟೂ ಇಲ್ಲವೆಂದು ತಿಳಿದಿದೆಯಂತೆ!

■ ರಾಮ್